ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು).—

ಅ) ತಿಳಿದಿದೆ

ಆ) ಜಲಮೂಲದ ಸ್ಥಾಪನೆ ಬಿಟ್ಟು ಉಳಿದ ಎಲ್ಲಾ ಕೆಲಸಗಳು ಪೂರ್ಣಗೊಂಡಿರುತ್ತವೆ. ಜಲಮೂಲಕ್ಕಾಗಿ ಕೊರೆದ ಕೊಳವೆ ಭಾವಿಗಳು ವಿಫಲಗೊಂಡ ಕಾರಣ ಬದಲಿ ಜಲಮೂಲ ಸ್ಥಾಪನೆಗೆ ಪ್ರಯತ್ನಿಸಲಾಗುತ್ತಿದೆ.

ಇ) ಜಲಮೂಲದ ಸ್ಥಾಪನೆಗಾಗಿ ಭೂಗರ್ಭದ ಪರೀಕ್ಷೆಯಿಂದ ಕೊಳವೆ ಬಾವಿಯ ಸ್ಥಳವನ್ನು ಆಯ್ಕೆ ಮಾಡುವ ಕೆಲಸ ಪ್ರಗತಿಯಲ್ಲಿರುತ್ತದೆ. ಸೂಕ್ತ ಸ್ಥಳದ ಆಯ್ಕೆಯ ನಂತರ ಕೊಳವೆ ಭಾವಿಯನ್ನು ಕೊರೆದು ಯೋಜನೆಯನ್ನು ಪೂರ್ಣಗೊಳಿಸಲಾಗುವುದು.

ಶ್ರೀ ಬಾಬುರೆಡ್ಡಿ ವಿ ತುಂಗಳ್.— ಸನ್ಮಾನ್ಯ ಅಧ್ಯಕ್ಷರೆ, ತೆಗ್ಗಿ ಗ್ರಾಮಕ್ಕೆ ಇತಿಹಾಸ ಇದೆ. ಕರ್ನಾಟಕದ ಇತಿಹಾಸ ಪುರುಷನಾದ ವೀರ ಸಿಂಧೂರ ಲಕ್ಷ್ಮಣ ಹುತಾತ್ಮನಾದಂಥ ಊರು ಅದು. ಆತನ ಸಮಾಧಿ ಅಲ್ಲಿಯೇ ಇದೆ. ಕಳೆದ ಮೂರು ವರ್ಷಗಳಿಂದಲೂ ಅರ್ಧದಲ್ಲಿಯೇ ನಿಂತಿರತಕ್ಕ ಒಂದು ನೀರಿನ ಟ್ಯಾಂಕ್ ಇದೆ. ಮಾನ್ಯಮಂತ್ರಿಯವರು ಜಲ ಮೂಲದ ಸ್ಥಾಪನೆ ಬಿಟ್ಟು, ಉಳಿದ ಎಲ್ಲಾ ಕೆಲಸಗಳು ಪೂರ್ಣಗೊಂಡಿರುತ್ತವೆಯೆಂದು ಹೇಳಿದ್ದಾರೆ. ಜಲವೇ ಇಲ್ಲದ ಮೇಲೆ ಬೇರೆ ಕೆಲಸಗಳ ಅವಶ್ಯಕತೆ ಏನಿದೆ ? ಈ ಊರು ಘಟಪ್ರಭಾ ನದಿಯ ಎಡ ದಂಡೆಯ ಕಡೆಗೆ ಇದೆ. ನಿಮ್ಮ ಅಧಿಕಾರಿಗಳು ಪ್ರಾಮಾಣಿಕ ಪ್ರಯತ್ನ ಮಾಡಿದರೆ ನೀರು ಸಿಗುತ್ತದೆ. ಅವರಿಗೆ ಬಿಸಿ ಮುಟ್ಟಿಸಿ ಬೇಸಿಗೆ ಕಾವೇರ್ಪಟ್ಟರೂ ನೀರು ಕೊಡುವಂಥ ಕೆಲಸ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಅಬ್ದುಲ್‌ನಜೀರ್‌ಸಾಬ್.— ದುರಾದೃಷ್ಟವಶಾತ್ ಎಲ್ಲಾ ಕೆಲಸಗಳು ಮುಗಿಸಿದರೂ ಜಲ ಮೂಲ ಸಿಕ್ಕಿಲ್ಲ. ಇದು ಓವರ್‌ಬರ್ಡನ್ ಏರಿಯಾ; ದೂರದಲ್ಲಿ ನೀರು ಸಿಕ್ಕಿದರೂ ಅದನ್ನು ಬಳಸಿಕೊಂಡು ನೀರು ಕೊಡಬೇಕೆಂದು ಆದೇಶ ಕೊಡುತ್ತೇನೆ.

ಶ್ರೀ ಬಾಬುರೆಡ್ಡಿ ವಿ ತುಂಗಳ್.— ಸ್ವಾಮಿ, ನಿಮ್ಮ ಭೂಗರ್ಭ ತಜ್ಞರನ್ನು ನನ್ನ ಜೊತೆಯಲ್ಲಿ ಬರುವುದಕ್ಕೆ ಹೇಳಿ, ನೀರು ತೋರಿಸುತ್ತೇನೆ ಶಾಸಕರ ಜೊತೆ ಹೋಗುವುದಕ್ಕೆ ಆದೇಶ ಕೊಡಿ.

ಶ್ರೀ ಅಬ್ದುಲ್‌ನಜೀರ್‌ಸಾಬ್.— ಇದು ವ್ಯಕ್ತಿಗತ ಸಲಹೆ ಆದರೂ ಅವರೂ ಊರಿಗೆ ಹೋಗುವ ದಿನವನ್ನು ಟೈಂ ಕೊಟ್ಟರೆ, ಅಧಿಕಾರಿಗಳನ್ನು ಕಳುಹಿಸಿಕೊಡುತ್ತೇನೆ. ಇಲಾಖೆಯವರು ಒಂದು ಮಾನದಂಥ ಇಟ್ಟುಕೊಂಡು ಅದರ ಪ್ರಕಾರ ಕೆಲಸ ಮಾಡುತ್ತಿದ್ದಾರೆ.

ಕಡಿಮೆ ವೆಚ್ಚದ ಹಾಗೂ ಹುಡ್ಕೋ ಯೋಜನೆಗಳನ್ವಯದ ಮನೆಗಳು

೧೩೬೯. ಶ್ರೀ ಕೆ. ಎಚ್., ಶ್ರೀನಿವಾಸ್ (ಶಿವಮೊಗ್ಗ).— ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್‌ನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೩ರಿಂದ ಈವರೆಗೆ ರಾಜ್ಯದಲ್ಲಿ ಜನತಾ ಲೋಕಾಸ್ಟ್ ಹಾಗೂ ಹುಡ್ಕೋ ನೆರವು ಯೋಜನೆಗಳನ್ವಯ ಮಂಜೂರಾದ ಮನೆಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಈ ಬಗ್ಗೆ ವೆಚ್ಚ ಮಾಡಲು ಉದ್ದೇಶಿಸಿದ ಒಟ್ಟು ಮೊಬಲಗು ಎಷ್ಟು ?

ಇ) ಈ ಬಗ್ಗೆ ವಾಸ್ತವವಾಗಿ ಬಿಡುಗಡೆ ಮಾಡಿದ ಮೊಬಲಗೆಷ್ಟು ಹಾಗೂ ಪೂರ್ಣಗೊಳಿಸಿರುವ ಮನೆಗಳ ಸಂಖ್ಯೆ ಎಷ್ಟು ?

ಈ) ಮಂಜೂರಾಗಿದ್ದು ನಿರ್ಮಾಣಗೊಳ್ಳದೆ ಹಾಗೇ ಉಳಿದಿರುವ ಮನೆಗಳ ಸಂಖ್ಯೆ ಎಷ್ಟು ?

ಶ್ರೀ ಅಬ್ದುಲ್‌ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ, ಪಂಚಾಯ್ತಿರಾಜ್ ವಸತಿ ಮತ್ತು ವಕ್ಫ್ ಸಚಿವರು).—

ಅ) ೧೯೮೩ರಿಂದ ಈವರೆಗೆ ರಾಜ್ಯದಲ್ಲಿ ಮಂಜೂರಾದ ಮನೆಗಳ ಸಂಖ್ಯೆ.

೧. ಜನತಾ ಲೋಕಾಸ್ಟ್ ಮನೆಗಳು	–	೪೨೨೯೦
೨. ಹುಡ್ಕೋ ಜನತಾ ಮನೆಗಳು	–	೨೦೫೫೪೫೦

ಅ) ವೆಚ್ಚ ಮಾಡಲು ಉದ್ದೇಶಿಸಿದ ಒಟ್ಟು ಮೊಬಲಗು (ಲಕ್ಷ ರೂ.ಗಳಲ್ಲಿ) ರೂ. ೧೦೩೫೭.೭೩

ಇ) ಬಿಡುಗಡೆ ಮಾಡಲಾದ ಮೊಬಲಗು

೧. ರೂ. ೬೬೭೨.೬೨ ಲಕ್ಷ ರೂ.ಗಳು

೨. ಪೂರ್ಣಗೊಂಡಿರುವ ಮನೆಗಳ ಸಂಖ್ಯೆ

ಅ. ಜನತಾ ಲೋಕಾಸ್ಟ್ ಮನೆಗಳು ೪೮೩೦೫

ಆ. ಹುಡ್ಕೋ ಜನತಾ ಮನೆಗಳು ೧೦೬೧೬೨

ಈ ಪೂರ್ಣಗೊಳ್ಳದೆ ಉಳಿದಿರುವ ಮನೆಗಳ ಸಂಖ್ಯೆ

೧. ಜನತಾ ಲೋಕಾಸ್ಟ್ ಮನೆಗಳು ೩೩೯೫೫

೨. ಹುಡ್ಕೋ ಜನತಾ ಮನೆಗಳು ೯೯೩೮೮

ಶ್ರೀ ಕೆ. ಹೆಚ್. ಶ್ರೀನಿವಾಸ್,— ನಾವು ಈ ಬಗ್ಗೆ ಪದೇ ಪದೇ ಸರ್ಕಾರದ ಗಮನವನ್ನು ಸೆಳೆದಾಗ್ಯೂ ಕೂಡ ೧೯೮೩ರಿಂದ ಈವರೆಗೆ ಜನತಾ ಮಂತ್ತು ಕಡಿಮೆ ವೆಚ್ಚದ ಮನೆಗಳು ನಿರ್ಮಾಣ ಆಗಿಲ್ಲ. ನೀವು ಇಟ್ಟುಕೊಂಡಿರತಕ್ಕ ಟಾರ್ಗೆಟ್ ಬಹಳ ಕಡಿಮೆ ಇದೆ. ೧೯೮೩ರಿಂದ ಈವರೆಗೆ ಜನತಾ ಲೋಕಾಸ್ಟ್ ಮನೆಗಳು ೮೨೨೯೧, ಹುಡ್ಕೋ ಜನತಾ ಮನೆಗಳು ೨೦೫೪೫೦ ಇಷ್ಟು ಕಡಿಮೆ ಟಾರ್ಗೆಟ್ ಇಟ್ಟುಕೊಂಡು ನೀವು ಕೊಟ್ಟಿರುವುದು ನೋಡಿದರೆ ೫೦ ಪರ್ಸೆಂಟ್ ಕೂಡ ಆಗಿಲ್ಲ. ಇನ್ನೂ ಬಿಡುಗಡೆ ಮಾಡಿರುವ ಹಣ ೧೦೩ ಕೋಟಿ ರೂಪಾಯಿಗಳಲ್ಲಿ ೬೬ ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದೀರಿ. ಶೇಕಡ ೫೦ ಭಾಗ ತಾವು ಹಾಗೆಯೇ ಉಳಿಸಿದ್ದೀರಿ. ಈ ಅಂಕಿ ಸ್ವಲ್ಪ ತಪ್ಪಾಗಿ ಕಾಣುತ್ತಿದೆ.

ಶ್ರೀ ಅಬ್ದುಲ್ ನಜೀರ್‌ಸಾಬ್.— ಸರಿ ಇದೆ, ೧೦೩ ಕೋಟಿ ರೂಪಾಯಿಗಳಲ್ಲಿ ೬೬ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಇದನ್ನು ಕೋಟಿಯಲ್ಲಿಯೇ ಕೊಟ್ಟಿದ್ದರೆ ರಗಳೆ ಇರಲಿಲ್ಲ. ಈ ಬಗ್ಗೆ ಹೇಳಬೇಕು ಅಂದರೆ, ನಿಮ್ಮ ೨೦ ಅಂಶಗಳ ಕಾರ್ಯಕ್ರಮವನ್ನು ರಿವ್ಯೂ ಮಾಡಿದಾಗಲೂ ಇದರ ಬಗ್ಗೆ ತುಂಬಾ ತಾತ್ಸಾರವಾಗಿದೆ. ಈ ಬಗ್ಗೆ ಇಷ್ಟು ತಾತ್ಸಾರ ಮಾಡಲಿಕ್ಕೆ ಕಾರಣ ಏನು ? ನಿಮ್ಮ ನಿಮ್ಮ ದೃಷ್ಟಿಯಲ್ಲಿ ಇದು ಬಹಳ ಪ್ರಾಮುಖ್ಯವಾದ ಕಾರ್ಯಕ್ರಮ ಅಲ್ಲವೇ ? ಅದಕ್ಕೋಸ್ಕರ ತಾತ್ಸಾರ ಮಾಡಿದ್ದೀರಾ ? ಟಾರ್ಗೆಟ್ ಜಾಸ್ತಿ ಮಾಡಿ ಕಂಪ್ಲೀಟ್ ಮಾಡಲಿಕ್ಕೆ ಸರ್ಕಾರ ಯಾವ ಪ್ರಯತ್ನ ಪಟ್ಟಿದೆ? ಹೋದ ವರ್ಷ ಇದೇ ರೀತಿ ಉತ್ತರ ಕೊಟ್ಟು ಮೇ ತಿಂಗಳಿನಲ್ಲಿ ಬ್ಯಾಕ್‌ಲಾಗ್ ಕಂಪ್ಲೀಟ್ ಮಾಡುತ್ತೇವೆಂದು ಹೇಳಿದ್ದರು. ಈಗ ಮತ್ತಷ್ಟು ಜಾಸ್ತಿಯಾಗಿದೆ. ಆದ್ದರಿಂದ ಖಚಿತವಾದ ಉತ್ತರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಅಬ್ದುಲ್‌ನಜೀರ್‌ಸಾಬ್.— ಮಾನ್ಯ ಸದಸ್ಯರ ಅಭಿಪ್ರಾಯವನ್ನು ಒಪ್ಪುತ್ತೇನೆ. ಕಡಿಮೆ ವೆಚ್ಚದ ಮನೆಗಳು ಪೂರ್ತಿ ಆಗದೇ ಇರುವುದಕ್ಕೆ ಒಂದು ದೃಷ್ಟಿಯಿಂದ ಅಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಅಷ್ಟು ಮುತುವರ್ಜಿ ವಹಿಸಿಲ್ಲ ಎನ್ನುವುದು ನಿಜ ನಾನುಸತ್ಯ ಒಪ್ಪಿಕೊಳ್ಳುತ್ತೇನೆ. ಜನತಾ ಮನೆಗಳು ೯೯ ಸಾವಿರ ಕೊಡಬೇಕಾದ್ದು ಇದೆ. ಅದರಲ್ಲಿ ೪೪ ಸಾವಿರ ಬ್ಯಾಕ್‌ಲಾಗ್ ಇರುವುದು ಒಂದು ಕಾರಣ ಹುಡ್ಕೋದಿಂದ ಬರತಕ್ಕ ನೆರವು ೯ ಕೋಟಿ ರೂಪಾಯಿ ಬಂದಿಲ್ಲ. ೧೯೮೫-೮೬ಕ್ಕೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರ ಕೊಡಬೇಕಾಗಿರತಕ್ಕ ಸಬ್ಸಿಡಿ ರಿಲೀಸ್ ಮಾಡಿದರೂ ಹುಡ್ಕೋದಿಂದ ಬರತಕ್ಕ ಹಣ ನಮಗೆ ಬಂದಿಲ್ಲ.

ಈಗ ನಾವು ಏನು ಮಾಡುತ್ತಿದ್ದೇವೆಂದರೆ ೧೯೮೬-೮೭ರಲ್ಲಿ ಏನುನೆ ರವನ್ನು ನಮ್ಮ ಸರ್ಕಾರದ ವತಿಯಿಂದ ಕೊಡಬೇಕಾಗಿತ್ತೋ ಅದನ್ನು ೮೫-೮೬ಕ್ಕೆ ಕೊಟ್ಟು ಆ ಮನೆಗಳನ್ನು ಪೂರ್ತಿ ಗೊಳಿಸುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ, ಆದರೆ ೮೬-೮೭ರಲ್ಲಿ ೫೦ ಸಾವಿರ ಮನೆಗಳನ್ನು ಏನು ಕಟ್ಟಬೇಕಾಗಿತ್ತು ಅದರಲ್ಲಿ ನಿಧಾನವಾಗಿದೆ. ಇದಕ್ಕೋಸ್ಕರ ನಾವು ಏನು ಮಾಡಿದ್ದೇವೆ ಎಂದರೆ ಹುಡ್ಕೋವನ್ನು ಬಿಟ್ಟು ಬ್ಯಾಂಕ್‌ಗಳ ಮೂಲಕ ಹಣವನ್ನು ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಬ್ಯಾಂಕ್‌ಗೆ ಖಾತರಿ ಸಿಕ್ಕಿದೆ. ಇಷ್ಟರಲ್ಲೇ ನಾವು ಈ ದಿಸೆಯಲ್ಲಿ ಕಾರ್ಯ ಪ್ರಗತಿಗೊಳ್ಳುತ್ತೇವೆ. ಇನ್ನೂ ಹುಡ್ಕೋ

ದಿಂದ ನಮಗೆ ಬರಬೇಕಾದ ನೆರವು ಏತಕ್ಕೆ ನಿಧಾನವಾಗುತ್ತಿದೆ ಎಂಬುದನ್ನು ನಾನು ವಿಮರ್ಶೆ ಮಾಡಿ ನೋಡುತ್ತೇನೆ, ಮತ್ತು ಇದರಲ್ಲಿ ಏನು ಮನೆಗಳನ್ನು ಕಟ್ಟ ಬೇಕಾಗಿದೆ ಅದನ್ನು ಆದಷ್ಟು ಬೇಗ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ನಾವು ಕಟ್ಟುತ್ತಿರುವ ಮನೆಗಳು ಕಡಿಮೆ, ಇರತಕ್ಕ ಬೇಡಿಕೆಗೆ ಸಾಕಾಗುತ್ತಿಲ್ಲ ಎಂಬುದನ್ನು ನಾನು ಒಪ್ಪಿ ಕೊಳ್ಳುತ್ತೇನೆ. ಹೆಚ್ಚು ಹೆಚ್ಚು ಲೋ ಕಾಸ್ಟ್ ಮನೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕಟ್ಟಬೇಕಾಗಿದೆ. ನಾವು ಸಂಪನ್ಮೂಲಗಳನ್ನು ಒದಗಿಸಿ ಕೊಳ್ಳುವ ಬಗ್ಗೆ ಮತ್ತು ಬ್ಯಾಂಕ್‌ಗಳಿಂದ ಬರಬೇಕಾದ ಸಂಪನ್ಮೂಲಗಳ ಬಗ್ಗೆ ಸಧ್ಯದಲ್ಲೇ ಪ್ರಯತ್ನ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್. — ನಿಮ್ಮ ಸಮಗ್ರ ಯೋಜನೆಯಲ್ಲಿ ಆಗಿರತಕ್ಕ ಕಾರ್ಯ ವೈಫಲ್ಯಕ್ಕೆ ಮುಖ್ಯ ಕಾರಣ ಏಂದರೆ ೮೫–೮೬ನೇ ಸಾಲಿನಿಂದ ಇದುವರೆಗೂ ನೀವು ಯಾವುದೇ ಪ್ರಯತ್ನ ವನ್ನೂ ಮಾಡಿಲ್ಲ. ಹುಡ್ಕೋದಿಂದ ನಮಗೆ ಸಹಾಯ ಬರಲಿಲ್ಲ ಎಂದು ತಾವು ಹೇಳುತ್ತಿರುವುದು ಸರಿಯಲ್ಲ, ಸರ್ಕಾರ ಇದೆ. ನೀವು ಸೂಕ್ತ ವ್ಯವಸ್ಥೆ ಮಾಡಿಕೊಳ್ಳಬೇಕು ಹುಡ್ಕೋದಿಂದ ಬರುವುದು ಸ್ವಲ್ಪ ತಡವಾಗಿದೆ. ಆದರೆ ಯಾರೋ ಖಾಸಗಿಯವರು ಹೇಳಿದಂತೆ ನಮಗೆಹುಡ್ಕೋದಿಂದ ಸಹಾಯ ಬರಬೇಕಾಗಿತ್ತು, ಬರಲಿಲ್ಲ ಆದ್ದರಿಂದ ತಾವು ಮಾಡುವುದಕ್ಕೆ ಆಗಲಿಲ್ಲ ಎಂದು ಹೇಳತಕ್ಕ ಜವಾಬು ಸರಿಯಲ್ಲ. ಈ ಕಾರ್ಯ ಕ್ರಮಕ್ಕೆ ಹೆಚ್ಚಿನ ಆದ್ಯತೆ ಇದೆ. ಇದನ್ನು ಮುಗಿಸಬೇಕಾದ್ದು ನಿಮ್ಮ ಕರ್ತವ್ಯ. ನಮಗೆ ಗ್ಯಾರಂಟ್ ಬರಲಿಲ್ಲ ಎಂದು ತಾವು ಹೇಳುವುದನ್ನು ನಾನೂ ಒಪ್ಪಿ ಕೊಳ್ಳುತ್ತೇನೆ. ಆದರೆ ಪ್ರತಿ ವರ್ಷವೂ ಸರ್ಕಾರ ಇದೇ ರೀತಿ ಉತ್ತರ ಕೊಡುತ್ತಾ ಬರುವುದು ಭೂಷಣ ಅಲ್ಲ. ಈ ಸಾರಿ ನಾವು ಇಷ್ಟು ಮನೆಗಳನ್ನು ಜನರಿಗೆ ಕಟ್ಟಿಸಿ ಕೊಡುತ್ತೇವೆಂದು ಹೇಳಿದ ಮೇಲೆ ಅದರಂತೆ ನಡೆದು ಕೊಳ್ಳಬೇಕು ನಾವು ಸಮಗ್ರ ಯೋಜನೆ ಮಾಡುತ್ತೇವೆಂದು ಹೇಳುತ್ತಾ ಹೇಳುತ್ತಾ ಕಾಲ ತಳ್ಳುವುದು ಸರಿಯಲ್ಲ. ಈಗಿರತಕ್ಕ ಅಂಕಿ ಅಂಶಗಳ ಆಧಾರದ ಮೇಲೆ ಕಾರ್ಯ ಮಾಡಬೇಕೆಂದು ಸರ್ಕಾರ ದವರು ಅಧಿಕಾರಿಗಳಿಗೆ ಆದೇಶ ಕೊಡಬೇಕು. ಎಲ್ಲಿ ಕಾರ್ಯ ವೈಫಲ್ಯ ಅಧಿಕಾರಿಗಳಿಂದ ಆಗುತ್ತದೆ ಎಂದರೆ, ಯಾವ ಕೆಲಸದಲ್ಲಿ ಸರ್ಕಾರಕ್ಕೆ ಆಸಕ್ತಿ ಇಲ್ಲ ಎಂಬುದನ್ನು ಅಧಿಕಾರಿಗಳು ಕಂಡು ಕೊಳ್ಳುತ್ತಾರೆ, ಸರ್ಕಾರ ನಮ್ಮನ್ನು ಕೇಳುವುದಿಲ್ಲ ಎಂದು ತಿಳಿದುಕೊಳ್ಳುತ್ತಾರೆ ಆಗ ಅಧಿಕಾರಿಗಳಲ್ಲಿ ತಾತ್ಸಾರ ಮನೋ ಭಾವನೆ ಬರುತ್ತದೆ. ಆದ್ದರಿಂದ ನೀವು ಬಿಗಿಯಾಗಿರಬೇಕು.

ಶ್ರೀ ಅಬ್ದುಲ್ ನಜೀರ್‌ಸಾಬ್. — ನಮ್ಮ ಬೇರೆ ಬೇರೆ ಕಾರ್ಯಕ್ರಮಗಳಿಗೆ ಇರತಕ್ಕ ಹಣವನ್ನೆಲ್ಲಾ ಈ ಯೋಜನೆಗೆ ತಂದು ಒಟ್ಟಿಗೇ ಹಾಕುವುದಕ್ಕೆ ಸಾಧ್ಯವಿಲ್ಲ ನಾವು ೮೫–೮೬ ರಿಂದ ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ನೋಡಿಕೊಂಡು ಬರುತ್ತಿದ್ದೇವೆ. ಹುಡ್ಕೋದಿಂದ ನಮಗೆ ಬರಬೇಕಾದ ಹಣದ ನೆರವು ಬಂದಿಲ್ಲ, ಕೇಳಿದರೆ ಇನ್‌ಸ್ಪೆಕ್ಷನ್ ಆಗಬೇಕೆಂದು ಹೇಳುತ್ತಾರೆ ಇದರಿಂದಾಗಿ ನಮ್ಮ ಕಾರ್ಯ ನಿಧಾನವಾಗುತ್ತಿದೆ, ಅವರೂ ಕೂಡ ಒಂದು ಗುರಿಯನ್ನು ಇಟ್ಟುಕೊಳ್ಳುವಾಗ ಸ್ವಲ್ಪ ಜಾಸ್ತಿಯೇ ಇಟ್ಟು ಕೊಂಡು ನಮಗೆ ಹೇಳಿರುತ್ತಾರೆ. ಆದರೆ ಅವರಿಂದ ಬರತಕ್ಕ ನೆರವು ತಡವಾಗು ವುದರಿಂದ ನಮ್ಮ ಕೆಲಸವೂ ನಿಧಾನವಾಗುತ್ತದೆಂಬ ವಿಚಾರ ಮಾನ್ಯ ಸದಸ್ಯರಿಗೆ ಗೊತ್ತಿಲ್ಲದೇ ಏನೂ ಇಲ್ಲ. ಇನ್ನು ಲೋ ಕಾಸ್ಟ್ ಹೌಸಿಂಗ್ ನಿರ್ಮಾಣ ಕಾರ್ಯ ಏತಕ್ಕೆ ತಡವಾಗುತ್ತಿದೆ ಎಂಬುದನ್ನು ನಾನು ಪರಿಶೀಲಿಸುತ್ತೇನೆ. ಹುಡ್ಕೋದಿಂದ ನಮಗೆ ನೆರವು ಬಂದೇ ಬರುತ್ತದೆಂದು ನಾವು ಖಚಿತವಾಗಿ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದಲೇ ನಾವು ಬ್ಯಾಂಕ್‌ಗಳಿಂದ ಹೆಚ್ಚಿನ ಹಣವನ್ನು ಪಡೆದು ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವು. ನಮಗೆ ೧೫ ಕೋಟಿ ರೂಪಾಯಿ ಏನು ನೆರವು ಹುಡ್ಕೋದಿಂದು ಬರಬೇಕಾಗಿತ್ತು ಆದಕ್ಕೆ ಬದಲಾಗಿ ಕೇವಲ ೪.೫ ಕೋಟಿ ರೂಪಾಯಿ ಮಾತ್ರ ಬಂದಿದೆ, ಇದರಿಂದಾಗಿ ನಾವು ಉಳಿದ ಹಣವನ್ನು ಬ್ಯಾಂಕ್‌ಗಳಿಂದ ಹೆಚ್ಚಿನ ಬಡ್ಡಿಯನ್ನು ಕೊಟ್ಟು ತೆಗೆದುಕೊಳ್ಳುತ್ತೇವೆ. ನಾವು ಎಷ್ಟು ಮನೆಗಳನ್ನು ಕಟ್ಟಿಸಿ ಕೊಡಬೇಕು, ಇರತಕ್ಕ ಬೇಡಿಕೆ ಏನು, ಈ ಮನೆಗಳಿಗೆ ಎಷ್ಟು ಹಣ ತಂದರೆ ಪೂರ್ತಿ ಮಾಡುವುದಕ್ಕೆ ಸಾಧ್ಯ ಎಂಬುದನ್ನು ನಾವು ಯೋಚನೆ ಮಾಡುತ್ತಿದ್ದೇವೆ. ಇದಕ್ಕೆ ಸಂಬಂಧ ಪಟ್ಟಂತೆ ಪೂರ್ಣ ವರದಿ ನನ್ನ ಮುಂದಿದೆ.